**ಹೆಣ್ಣು ಮಕ್ಕಳ ಮದುವೆಯ ಕನಿಷ್ಟ ವಯಸ್ಸನ್ನು 18 ರಿಂದ 21 ವರ್ಷಕ್ಕೆ ಹೆಚ್ಚು ಮಾಡುವುದು ನಮಗೆ ಬೇಕಿಲ್ಲ**

ಭಾರತ ಸರ್ಕಾರವು ಹೆಣ್ಣು ಮಕ್ಕಳ ಮದುವೆಯ ಕನಿಷ್ಟ ವಯಸ್ಸನ್ನು 18 ರಿಂದ 21 ವರ್ಷಕ್ಕೆ ಹೆಚ್ಚಿಸಲು ನಿರ್ಧಾರವನ್ನು ಗಂಭೀರವಾಗಿ ಆಲೋಚಿಸುತ್ತಿದೆ. ಇದರ ಕುರಿತು ನಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ನಾವು ಮುಂದಾಗಿದ್ದೇವೆ. ನಾವು ಎಂದರೆ ಭಾರತದ 15 ರಾಜ್ಯಗಳ ಬದಿಗೊತ್ತಲ್ಪಟ್ಟ ಸಮುದಾಯಗಳಿಂದ 2500 ಯುವಜನರು. ನಮಗೆ 96 ಸಂಘ ಸಂಸ್ಥೆಗಳು ಒಗ್ಗೂಡಿ ಸೌಕರ್ಯ ಒದಗಿಸಿವೆ. ಈ ಅರ್ಜಿಯ ಮೂಲಕ ಮುಂದಾಗಿದ್ದೇವೆ.

ನಿಮ್ಮಲ್ಲಿ ಕೆಲವರಿಗೆ ಹೆಣ್ಣು ಮಕ್ಕಳ ಮದುವೆಯ ಕನಿಷ್ಟ ವಯಸ್ಸನ್ನು 18 ರಿಂದ 21 ವರ್ಷಕ್ಕೆ ಹೆಚ್ಚಿಸಲು ನಿರ್ಧಾರವು ಒಳ್ಳೆಯದು ಅನಿಸಬಹುದು. ಆದರೆ ನಮಗೆ ಅದು ಒಳ್ಳೆಯದಲ್ಲ ಅನಿಸುತ್ತದೆ. ಏಕೆಂದರೆ:

- ಮದುವೆಯ ಕನಿಷ್ಟ ವಯಸ್ಸನ್ನು ಹೆಚ್ಚಿಸುವುದರಿಂದ ತಾನೇ ತಾನಾಗಿ ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ. ಏಕೆಂದರೆ ನಮಗೆ ಉಪಯುಕ್ತ, ಒಳ್ಳೆಯ ಗುಣಮಟ್ಟದ, ಉಚಿತ ಶಿಕ್ಷಣವು ನಮಗೆ ಸಿಗುತ್ತಿಲ್ಲ
- ಮದುವೆಯ ಕನಿಷ್ಟ ವಯಸ್ಸನ್ನು ಹೆಚ್ಚಿಸುವುದರಿಂದ ಯುವಜನರ ನಡುವಿನ ಒಮ್ಮತದ ಸ್ನೇಹ ಸಂಬಂಧ ಇದ್ದ ಪ್ರಸಂಗಗಳಲ್ಲಿ ಅವರ ಮೇಲೆ ಅವರ ಕುಟುಂಬಗಳ ಹಾಗು ಸಮುದಾಯಗಳ ಒತ್ತಡ ಹಾಗು ದೌರ್ಜನ್ಯ ಹೆಚ್ಚಾಗುತ್ತದೆ
- ಈಗ ಹೆಚ್ಚಿನವರು ಹೆಣ್ಣು ಮಕ್ಕಳನ್ನು 'ಭಾರ' ಎಂದು ಭಾವಿಸಿ ಒತ್ತಡದ ಬಾಲ್ಯ ವಿವಾಹಗಳನ್ನು ನಮ್ಮ ಮೇಲೆ ಹೇರುತ್ತಾರೆ. ಅಂತಹ ಪೋಷಕರ ಅಥವ ಸಮಾಜದ ದೃಷ್ಟಿಕೋನವನ್ನು ಮದುವೆಯ ಕನಿಷ್ಟ ವಯಸ್ಸನ್ನು ಹೆಚ್ಚಿಸುವುದರಿಂದ ಬದಲಾಯಿಸಲು ಸಾಧ್ಯವಾಗುವುದಿಲ್ಲ
- ಸೂಕ್ತವಾದ ಉದ್ಯೋಗಾವಕಾಶಗಳು ಅಥವ ನಮ್ಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸೂಕ್ತ ಅವಕಾಶಗಳು ಮದುವೆಯ ಕನಿಷ್ಟ ವಯಸ್ಸನ್ನು ಹೆಚ್ಚಿಸುವುದರಿಂದ ತಾನೇ ತಾನಾಗಿ ಸಿಗುವುದಿಲ್ಲ.

ಇದರ ಬದಲಾಗಿ ನಮ್ಮ ಹಕ್ಕೊತ್ತಾಯ ಇಲ್ಲದೆ:

- ಅರ್ಥಪೂರ್ಣ ಶಿಕ್ಷಣವನ್ನು ಪಡೆದುಕೊಳ್ಳುವ ಹಕ್ಕು
- ನಮ್ಮ ಜೀವನದ ಕುರಿತು ನಿರ್ಧಾರ ತೆಗೆದುಕೊಳ್ಳುವ ಎಲ್ಲಾ ವೇದಿಕೆಗಳಲ್ಲಿ ನಮ್ಮನ್ನು ಒಳಗೊಳ್ಳಿಸಿ ನಮ್ಮನ್ನು ಕೇಳಿಸಿಕೊಳ್ಳಲೇಬೇಕು ಎನ್ನುವ ಹಕ್ಕು
- ಲೈಂಗಿಕ ಹಾಗು ಸಂತಾನೋತ್ಪತ್ತಿ ಆರೋಗ್ಯ, ದೈಹಿಕ ಸ್ವಾಯತ್ತತೆ ಹಾಗು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಹಕ್ಕು
- ಸೂಕ್ತ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳುವ ಹಕ್ಕು

ನಮ್ಮ ಅರ್ಜಿಗೆ ಸಹಿ ಹಾಕಿ. ಆ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವನ್ನು ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು ಹೆಚ್ಚಿಸಬಾರದು ಹಾಗು ಯುವಜನರ ಹಕ್ಕೊತ್ತಾಯವನ್ನು ಪೂರೈಸಬೇಕೊಂಬ ನಮ್ಮ ಕರೆಗೆ ನಮ್ಮೊಂದಿಗೆ ಕೈಜೋಡಿಸಿ.

ನಿಮ್ಮ ಟಿಪ್ಪಣಿಗಳೊಂದಿಗೆ ಅರ್ಜಿಗೆ ಸಹಿ ಹಾಕಿ, ನಿಮ್ಮ ಸ್ನೇಹಿತರು ಹಾಗು ಸಹೋದ್ಯೋಗಿಗಳೊಂದಿಗೆ ಈ ಅರ್ಜಿಯನ್ನು ಹಂಚಿಕೊಳ್ಳಿರಿ. ನೀವೂ ಕೂಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವನ್ನು ಉದ್ದೇಶಿಸಿ ಈ ಕೆಳಕಂಡ ಈಮೇಲ್ ವಿಳಾಸಗಳಿಗೆ ಹಾಗು ಟ್ವಿಟ್ಟರ್ ಹ್ಯಾಂಡಲ್‌ಗಳನ್ನು #YoungVoicesonMarriage #knowwhatWEwant ಹ್ಯಾಶ್‌ಟ್ಯಾಗ್‌ಗಳನ್ನು ಬಳಸಿ ಪತ್ರಗಳನ್ನು ಹಾಗು ಸಂದೇಶಗಳನ್ನು ಬರೆಯಬಹುದು:

ಪ್ರಧಾನ ಮಂತ್ರಿಗಳ ಕಛೇರಿ: @PMOIndia
ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ: @smritiirani
ಜಯಾ ಜೆಟ್ಲಿ, ಕೇಂದ್ರ ಸರ್ಕಾರ ರಚಿಸಿರುವ ಕಾರ್ಯಪಡೆಯ ಅಧ್ಯಕ್ಷರು: @JaitlyJaya

ಈಮೇಲ್ ವಿಳಾಸ:

ಪ್ರಧಾನ ಮಂತ್ರಿಗಳ ಕಛೇರಿ: https://pmopg.gov.in/pmocitizen/Grievancepmo.aspx

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ: min-wcd@gov.in

ಯುವ ಧ್ವನಿಗಳು – ರಾಷ್ಟ್ರೀಯ ವರದಿ:
https://www.concernedforworkingchildren.org/news/2020/07/young-voices-national-report-15-states-nearly-2500-young-people-submission-to-the-task-force-examining-age-of-marriage-and-other-concerns-july-2020/

ನಮ್ಮ ಈಮೇಲ್ ವಿಳಾಸ: cwc@pobox.com